

# ಹುಚ್ಚು ನಾಯಿ ಕಡಿದಿದೆಯೇ? ರೇಬಿಸ್ ಬಂದೀತು..

**ನಾಯಿ ಕಡಿದ ಕೂಡಲೇ ವೈದ್ಯರನ್ನು ಕಾಣಬೇಕು. ಸಣ್ಣ ಗಾಯವಾದರೂ ತಕ್ಷಣ ಸೂಕ್ತ ಚಿಕಿತ್ಸೆ, ಲಸಿಕೆ ಪಡೆಯಲೇ ಬೇಕು. ಇದನ್ನು ನಿರ್ಲಕ್ಷಿಸಿದರೆ ಅಪಾಯ ತಪ್ಪಿದ್ದಲ್ಲ. ರೇಬಿಸ್ ಸೋಂಕು ತಗಲಿದರೆ ಅದು ಮಾರಣಾಂತಿಕವೂ ಆದೀತು.**

■ **ಡಾ.ಪಿ.ಜಿ. ಶಿವಾನಂದ್**

ಮನುಷ್ಯರಿಗೆ ಹುಚ್ಚು ನಾಯಿ ಕಡಿದರೆ ರೇಬಿಸ್ ಬರುತ್ತದೆ. ಸೋಂಕಿತ ನಾಯಿಯ ಜೊಲ್ಲಿನಲ್ಲಿರುವ ವೈರಾಣುವಿನಿಂದ ಈ ರೋಗ ಹರಡುತ್ತದೆ. ರೇಬಿಸ್ ನಿಂದ ಮನುಷ್ಯನ ಕೇಂದ್ರ ನರಮಂಡಲದ ಬೆನ್ನು ಹುರಿ ಉರಿತ ಉಂಟಾಗುತ್ತದೆ. ಇದು ಅತ್ಯಂತ ಅಪಾಯಕಾರಿ ಹಾಗೂ ಮಾರಣಾಂತಿಕ ಕಾಯಿಲೆ ಎಂದೇ ಪರಿಗಣಿತವಾಗಿದೆ.

## ರೇಬಿಸ್ ಹರಡುವುದು ಹೇಗೆ?

ರೋಗ ತಗಲುವುದು ಹುಚ್ಚುನಾಯಿ ಕಚ್ಚುವುದರಿಂದ ಮತ್ತು ಜೊಲ್ಲಿನಲ್ಲಿರುವ ವೈರಾಣು ಗಾಯದ ಮೂಲಕ ದೇಹವನ್ನು ಪ್ರವೇಶಿಸುವುದರಿಂದ. ಭಾರತದಲ್ಲಿ ಒಂದು ಆರೋಗ್ಯಕರ ನಾಯಿ ಮಗುವನ್ನು ಕಚ್ಚಿ ಆ ಮಗುವಿಗೆ ರೇಬಿಸ್ ಸೋಂಕು ತಗುಲಿ ಮೃತಪಟ್ಟಿತು. ಆ ನಾಯಿ ನಾಲ್ಕು ವರ್ಷಗಳ ಕಾಲ ಜೀವಿಸಿತ್ತು. ಅಂದರೆ ಆ ನಾಯಿಯಲ್ಲಿ ರೇಬಿಸ್ ಸೋಂಕಿನ ಲಕ್ಷಣಗಳಿಲ್ಲದಿದ್ದರೂ ರೇಬಿಸ್ ಸೋಂಕನ್ನು ಹರಡಿತ್ತು. ಇದೊಂದು ಅಪರೂಪದ ಸಂಗತಿಯಾದರೂ ನಾಯಿ ಆರೋಗ್ಯವಂತ ರೋಗವಾಹಕ ಎಂಬುದನ್ನು ಗಮನಿಸಬೇಕು.

ಬೆಕ್ಕು, ಕೋತಿ, ಕುರಿ, ಮೇಕೆಗಳಿಂದಲೂ ರೇಬಿಸ್ ಬರಬಹುದು. ಮನುಷ್ಯರಿಂದ ಮನುಷ್ಯರಿಗೆ ರೇಬಿಸ್ ಹರಡುವ ಸಾಧ್ಯತೆ ಕಡಿಮೆ. ಆದರೆ ಅಂಗಾಂಗಗಳ ಕಸಿ ಮಾಡುವಾಗ ಹರಡುವ ಸಾಧ್ಯತೆ ಇದೆ. ಸಾಮಾನ್ಯವಾಗಿ ರೇಬಿಸ್ ಹುಚ್ಚುನಾಯಿ ಅಥವಾ ಬೇರೆ ರೇಬಿಸ್ ಇರುವ ಪ್ರಾಣಿಗಳ ಕಡಿತದಿಂದ ಉಂಟಾಗುತ್ತದೆ. ಅದರ ಜೊಲ್ಲಿನಲ್ಲಿರುವ ವೈರಾಣು ಕಚ್ಚಿದ ಗಾಯದಿಂದ ದೇಹದ ಒಳಗೆ ಪ್ರವೇಶಿಸುತ್ತದೆ. ವೈರಾಣು ನರಗಳ ಮೂಲಕ ಹಾದು ಹೋಗಿ ಕೇಂದ್ರ ನರಮಂಡಲವನ್ನು ಮುತ್ತುತ್ತದೆ. ನರಮಂಡಲದಲ್ಲಿ ಸೋಂಕುಂಟು ಮಾಡುತ್ತದೆ. ನಂತರ ಪುನಃ ನರಗಳ ಮೂಲಕ ಸ್ನಾಯುಗಳು, ಚರ್ಮ, ಅಂಗಾಂಶಗಳು ಮತ್ತು ಲಾಲಾರಸ ಗ್ರಂಥಿಗಳಿಗೂ ಹರಡುತ್ತದೆ.

## ರೋಗ ಲಕ್ಷಣಗಳು

ಸುಮಾರು ಒಂದರಿಂದ ಮೂರು ತಿಂಗಳ ಕಾಲ ತಲೆನೋವು, ಜ್ವರ, ಖಿನ್ನತೆ, ಉದ್ರೇಕ, ನಿದ್ರಾಹೀನತೆ ಉಂಟಾಗುತ್ತದೆ. ನಾಯಿ ಕಚ್ಚಿದ ಜಾಗದಲ್ಲಿ ಜೋಮು, ನೋವು ಇರುತ್ತದೆ. ಗಾಯವಾಗಿರುವ ಜಾಗ ಮೆದುಳಿಗೆ ಹತ್ತಿರವಿದ್ದರೆ ರೋಗ ಲಕ್ಷಣಗಳು ಬೇಗ ಗೋಚರಿಸುತ್ತವೆ. ನರಮಂಡಲದಲ್ಲಿ ವೃದ್ಧಿಯ ಕಾಲ ಚಿತ್ತಭ್ರಮೆ, ಶಬ್ದವೆಂದರೆ ಹೆದರಿಕೆ, ದ್ರವ ಸ್ವೀಕರಿಸಲು ಹೆದರಿಕೆ ಉಂಟಾಗುತ್ತದೆ. ನೀರನ್ನು ಕುಡಿದಾಗ ಗಂಟಲಿನ ಮಾಂಸಖಂಡಗಳಲ್ಲಿ ಸೆಳೆತ, ನೋವು ಉಂಟಾಗಿ ನೀರು ಕುಡಿಯಲು ಅಸಾಧ್ಯವಾಗುತ್ತದೆ. ಆಮೇಲೆ ನೀರನ್ನು ನೋಡಿದರೆ ಭಯವಾಗುತ್ತದೆ. ಬಾಯಾರಿಕೆಯಾಗುತ್ತದೆ ಆದರೆ ನೀರು ಕುಡಿಯಲು ಸಾಧ್ಯವಿಲ್ಲ. ಇದು ಈ ಕಾಯಿಲೆಯ ಮುಖ್ಯವಾದ ಲಕ್ಷಣ. ಕೊನೆಗೆ ಲಕ್ವ, ಪ್ರಜ್ಞಾಶೂನ್ಯ ಸ್ಥಿತಿ ತಲುಪಿ ವ್ಯಕ್ತಿ ಸಾವನ್ನಪ್ಪುತ್ತಾನೆ.

